

## ಜಿಪುಣಾಗ್ರೇಸರ

ಗುಂಡ ತನ್ನ ಪ್ರಿಯತಮೆಯೊಂದಿಗೆ ಹೋಟೆಲಿಗೆ ಹೋಗಿದ್ದನು. ತಂದೆ ಕೇಳಿದರು. 'ಎಲ್ಲಿಗೆ ಹೋಗಿದ್ದೆ'? ಗುಂಡ ಹೇಳಿದ: 'ಹುಡುಗಿಯ ಜೊತೆಗೆ ಹೋಟೆಲಿಗೆ ಹೋಗಿದ್ದೆ, ಅಪ್ಪಾ.'

ತಂದೆ ಕೇಳಿದರು, 'ಎಷ್ಟು ಖರ್ಚಾಯಿತು'.

ಅದಕ್ಕೆ ಗುಂಡ, 'ಐದು ನೂರು ರೂಪಾಯಿ' ಎಂದ.

ಜಿಪುಣ ತಂದೆ ಹೇಳಿದರು– 'ಅಯೋಗ್ಯ, 500 ರೂಪಾಯಿ?!' ಜಿಪುಣಾಗ್ರೇಸರ ಗುಂಡ ಹೇಳಿದನು, 'ಇನ್ನೇನು ಮಾಡಲಿ ಅಪ್ಪಾ ಅವಳ ಬಳಿ ಇದ್ದದ್ದೇ ಅಷ್ಟು!'

**ಶೋಭಾ ಪ್ರಮೋದ್**

## ಶವ ಪೆಟ್ಟಿಗೆ

ರಾತ್ರಿಪಾಳಿಯಲ್ಲಿದ್ದ ಪೊಲೀಸ್ ಪೇದೆಯೊಬ್ಬ ಯಾರನ್ನಾದರೂ ಬೆದರಿಸಿ ಸ್ವಲ್ಪ ಹಣ ಮಾಡಬಹುದೆಂದು ಯೋಚಿಸುತ್ತಾ ಸ್ಮಶಾನದ ರಸ್ತೆಯಲ್ಲಿ ಸುತ್ತುತ್ತಿದ್ದ. ಆಗ ಎದುರಿಗೆ ವ್ಯಕ್ತಿಯೊಬ್ಬ ತಲೆಯ ಮೇಲೆ ಶವಪೆಟ್ಟಿಗೆ ಹೊತ್ತುಕೊಂಡು ಬಂದ. ಅವನನ್ನು ನಿಲ್ಲಿಸಿ, 'ಯಾರು ನೀನು? ಪೆಟ್ಟಿಗೆ ಹೊತ್ತು ಎಲ್ಲಿಗೆ ಹೊರಟೆ?' ಎಂದು ಗದರಿಸಿದ. ಆಗ ಆ ವ್ಯಕ್ತಿ ಜೋರಾಗಿ ನಕ್ಕು 'ನನ್ನನ್ನು ಎದುರಿಗಿರುವ ಸ್ಮಶಾನದಲ್ಲಿ ಹೂತಿದ್ರು. ನನಗ್ಯಾಕೋ ಆ ಜಾಗ ಸರಿಕಂಡು ಬಂದಿಲ್ಲ. ಅದಕ್ಕೆ ಬೇರೆಲ್ಲಾದರೂ ಸಮಾಧಿಯಾಗೋಣವೆಂದು ನನ್ನ ಶವಪೆಟ್ಟಿಗೆಯನ್ನು ಎತ್ತಿಕೊಂಡು ಹೊರಟೆ' ಎಂದ. ಅದನ್ನು ಕೇಳಿ ಪೊಲೀಸ್ ಪೇದೆ 'ಅಯ್ಯೋ ದೆವ್ವ...' ಎನ್ನುತ್ತಾ ಓಟ ಕಿತ್ತ. ಆ ವ್ಯಕ್ತಿ ನಕ್ಕು ತನ್ನ ತಲೆಯ ಮೇಲಿದ್ದ ಶವಪೆಟ್ಟಿಗೆಯನ್ನು ಕೆಳಗಿಳಿಸಿ ಮೊಬೈಲ್‌ನಲ್ಲಿ ಯಾರಿಗೋ 'ಸಾರ್ ಶವಪೆಟ್ಟಿಗೆ ಡೆಲಿವರಿ ಬಾಯ್, ನಿಮ್ಮ ಮನೆ ಅಡ್ರಸ್ ಎಲ್ಲಿ ಬರುತ್ತೆ ಅಂತ ಹೇಳಿ' ಎನ್ನುತ್ತಿದ್ದ!

**ರಮೇಶ್ ಶೆಟ್ಟಿಗಾರ್**

